(ಆ) ಇದರಿಂದ ಎಷ್ಟು ಕುಟುಂಬಗಳು ನಿರಾಶ್ರಿತವಾಗುತ್ತಿದೆ. ಹಾಗೂ ಅಂತಹವರಿಗೆ ಪುನರ್ ವ್ಯವಸ್ಥೆ ಮಾಡಿರುವ ಅನುಕೂಲತೆಗಳೇನು ?

(ಇ) ಈಗಾಗಲೇ ಪುನರ್ ವಸತಿ ಬಗ್ಗೆ ಎಷ್ಟು ಹಣ ಖರ್ಚಾಗಿರುತ್ತದೆ ?

ಶ್ರೀ ಲಕ್ಷ್ಮೀನರಸಿಂಹಯ್ಯ (ವಿದ್ಯುತ್ ರಾಜ್ಯ ಮಂತ್ರಿಗಳು).—

		ಎ—ಗುಂ—ಆ
(ಅ) (೧)	ಕೈಗಾ ಅಣು ಸ್ಥಾವರ ವಶಪಡಿಸಿಕೊಂಡ ಖಾಸಗಿ ಜಮೀನು	೪೧೪—೦೨—೮
(೨)	ವಸತಿ ಗೃಹಗಳಿಗೆ (ಟೌನ್‌ಶಿಪ್) ವಶಪಡಿಸಿಕೊಂಡ ಖಾಸಗಿ ಜಮೀನು	೨೫೮—೦೩—೦
	ಒಟ್ಟು	೬೭೨—೮೫—೮

(ಆ) ೧೨೧ ಕುಟುಂಬಗಳು. ಎಲ್ಲಾ ಕುಟುಂಬಗಳು ಮರು ವಸತಿ ಅನುದಾನ ಕೇಳಿರುತ್ತವೆ. ಈ ಅನುದಾನವನ್ನು ಕುಟುಂಬಗಳನ್ನು ಸ್ಥಳಾಂತರಿಸುವಾಗ ಪಾವತಿ ಮಾಡಲಾಗುತ್ತದೆ, ಈ ಕುಟುಂಬಗಳಿಗೆ ನಿವೇಶನ ಪಡೆಯುವ ಬಗ್ಗೆ ಪುನರ್ವಸತಿ ಸಮಿತಿಯು ನಿರ್ಧರಿಸಿದ್ದು ನಿವೇಶನಗಳನ್ನು ಕಾರವಾರ ತಾಲ್ಲೂಕು ಮಲ್ಲಾಪುರದ ಬಳಿ ಕೊಡುವ ಬಗ್ಗೆ ಪರಿಶೀಲಿಸಲಾಗುತ್ತಿದೆ.

(ಇ) ಈ ಬಗ್ಗೆ ಇನ್ನೂ ಹಣ ಖರ್ಚು ಮಾಡಿರುವುದಿಲ್ಲ.

ತಾಳಿ ಭಾಗ್ಯ ಯೋಜನೆ ಕಳೆದ ಎರಡು ವರ್ಷಗಳ ಪ್ರಗತಿ ಬಗ್ಗೆ.

೧೧೧. ಶ್ರೀ ಬಿ. ಎಸ್. ಯಡಿಯೂರಪ್ಪ (ಶಿಕಾರಿಪುರ).—ಮಾನ್ಯ ಸಮಾಜ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ತಾಳಿ ಭಾಗ್ಯ ಯೋಜನೆ ಪ್ರಾರಂಭವಾದ ನಂತರ ಈವರೆಗೆ ಪ್ರತಿ ವರ್ಷ ಜಿಲ್ಲಾವಾರು ಪ್ರಯೋಜನ ಪಡೆದವರ ಒಟ್ಟು ಸಂಖ್ಯೆ ಎಷ್ಟು ಹಾಗೂ ಅದಕ್ಕಾಗಿ ಖರ್ಚಾದ ಹಣವೆಷ್ಟು ?

ಆ) ಈ ಯೋಜನೆಯಲ್ಲಿ ದುರುಪಯೋಗವಾಗಿರುವುದು ಸರ್ಕಾರದವರ ಗಮನಕ್ಕೆ ದೂರು ಗಳೇನಾದರೂ ಬಂದಿವೆಯೇ ?

ಶ್ರೀ ಬಿ. ಬಸವಣ್ಣಪ್ಪ (ಸಮಾಜ ಕಲ್ಯಾಣ ಸಚಿವರು).—

ಅ) ಫಲಾನುಭವಿಗಳ ಸಂಖ್ಯೆ ೭,೫೬೪ ಮತ್ತು ೨೮,೬೫,೯೪೦.೮೫ ರೂ.ಗಳು ಖರ್ಚಾಗಿದೆ. ಜಿಲ್ಲಾವಾರು ಮಾಹಿತಿ ಅನುಬಂಧ 'ಅ' ನಲ್ಲಿ ವಿವರಗಳನ್ನು ಕೊಡಲಾಗಿದೆ.

ಆ) ಸರ್ಕಾರಕ್ಕೆ ದೂರುಗಳೇನು ಬಂದಿರುವುದಿಲ್ಲ.

ತಾಳಿಯ ಭಾಗ್ಯ ಯೋಜನೆಯನ್ವಯಂ ಜಿಲ್ಲಾವಾರಂ ಸಾಧಿಸಿದ ಪ್ರಗತಿ ವರದಿ

ಅ ನು ಬಂ ಧ — ಅ

ಜಿಲ್ಲೆಗಳು	೧೫-೦೮-೮೫ ರಿಂದ ೩೧-೦೮-೮೬		೦೧-೦೪-೮೬ ರಿಂದ ೩೧-೦೩-೮೭		೦೧-೦೪-೮೭ ರಿಂದ ೩೦-೧೧-೮೭	
	ಫಲಾನುಭವಿಗಳಂ	ಖರ್ಚಾದ ಹಣ	ಫಲಾನಂಭವಿಗಳು	ಖರ್ಚಾದ ಹಣ	ಫಲಾನುಭವಿಗಳು	ಖರ್ಚಾದ ಹಣ
೧	೨	೩	೪	೫	೬	೭
೧ ಬೆಂಗಳೂರು (ನಗರ)	...	...	...	...	೧೦೭	೩೫,೯೫೦-೦೦
೨ ಬೆಂಗಳೂರು (ಗ್ರಾ.)	೬೦	೨೮,೦೮೦-೦೦	೧೬೫	೯೧,೯೨೪-೦೦	೭೧	೨೭,೮೯೮-೮೦
೩ ಮಂಡ್ಯ	...	...	೧೨	೪,೪೦೬-೦೫	೯೦	೪,೭೫೮-೦೦
೪ ಮೈಸೂರು	೧೭೯	೬೨,೬೫೦-೦೦	೯೬	೩೫,೧೨೯-೫೦	೮೩	೨೯,೮೫೮-೦೦
೫ ಮಡಿಕೇರಿ	...	...	೨೬	೯,೧೦೦-೦೦	೩೧	೧೫,೯೨೦-೮೦
೬ ಮಂಗಳೂರು	೨೭	೨೩,೯೭೦-೦೦	೭೯	೧೧,೬೩೯-೨೦	...	...
೭ ಕಾರವಾರ	೩೪೬	೧,೨೪,೪೨೮-೦೦	೨೩೫	೧,೨೪,೯೩೬-೪೦	...	...
೮ ಚಿಕ್ಕಮಗಳೂರು	೩೬	೧೫,೭೭೯-೧೫	೯೦	೩೩,೩೯೭-೦೦	೧೧೪	೩೨,೭೬೯-೦೨
೯ ತುಮಕೂರು	...	...	...	...	೭೨	೨೭,೩೩೬-೦೦
೧೦ ಕೋಲಾರ	...	...	೧೪೩	೬೯,೭೬೯-೦೦	೩೬೬	೧,೧೭,೪೦೦-೨೦
೧೧ ಚಿತ್ರದುರ್ಗ	...		೩೨	೧೩,೧೧೬-೦೮	೧೬೩	೭೦,೧೬೭-೦೦
೧೨ ಬಿಜಾಪುರ	೧೧	೩,೪೫೦-೦೦	...	...	...	...
೧೩ ಶಿವಮೊಗ್ಗ	೨೨೬	೪೪,೬೬೬-೦೦	೫೧೪	೧,೫೯,೬೪ -೦೦	೧೬೪	೬೬,೫೬೩-೦೦
೧೪ ಬಳ್ಳಾರಿ	೪೦	೧೬,೧೯೬-೬೦	೨೧೫	೪೬,೬೭೦-೦೦	೪೩	೨೩,೫೦೦-೦೨
೧೫ ಬೆಳಗಾಂ	೧೬೩	೨೫,೬೩೦-೭೦	೧೨೭	೪೪,೪೫೬-೦೦	೭೪	೨೫,೬೦೦-೦೦
೧೬ ಧಾರವಾಡ	೧೩೪೬	೪,೮೨.೮೬೪-೬೫	೧೬೨೬	೬,೧೪,೬೦೪-೨೫	೮೧೧	೩,೬೮,೭೪೭-೬೫
೧೭ ಗುಲ್ಬರ್ಗಾ	...	...	...	...	...	...
೧೮ ರಾಯಚೂರು	೧೪೩	೫೫,೩೩೫-೮೦	೮೯	೩೫,೭೨೨-೦೦	೩೯	೧೯,೬೮೮-೦೨
೧೯ ಬೀದರ್	...	...	...	...	೧೦	೩,೫೯೦-೦೦
೨೦ ಹಾಸನ	...	...	೧೧೬	೪೬,೪೦೮-೦೦	...	...
ಒಟ್ಟು.	೨೫೭೩	೯,೧೫,೬೮೪-೯೦	೨೯೫೩	೧೧,೪೧,೨೧೭-೩೦	೨೦೩೮	೮,೮೮,೭೩೮-೬೫

ಶ್ರೀ ಬಿ. ಎಸ್. ಯಡಿಯೂರಪ್ಪ.—ಮಾನ್ಯ ಅಧ್ಯಕ್ಷರೇ, ತಾಳಿಭಾಗ್ಯ ಯೋಜನೆ ಪ್ರಾರಂಭವಾದ ಅನಂತರ ಇದುವರೆಗೆ ಒಟ್ಟು ರಾಜ್ಯದಲ್ಲಿ, ೭೫ಲಕ್ಷ ಜನರಿಗೆ ಇದರ ಲಾಭವನ್ನು ದೊರಕಿಸಿ ಕೊಟ್ಟಿದ್ದಾರೆ. ಅದರ ಬಗ್ಗೆ ಒಟ್ಟು ತಗಲಿದ ಖರ್ಚು, ೨೮.೭೫.೯೪.೮೫೫ ರೂಪಾಯಿಗಳು ಎಂದು ಮಾನ್ಯ ವಿಂತ್ರಿಗಳು ತಮ್ಮ ಉತ್ತರದಲ್ಲಿ ತಿಳಿಸಿದ್ದಾರೆ. ಹೀಗೆ ಈ ಯೋಜನೆಯಡಿಯಲ್ಲಿ ಸವಲತ್ತುಗಳನ್ನು ಕೊಡುವಾಗ ಒಬ್ಬೊಬ್ಬರಿಗೆ ಏನೇನು ಸೌಲಭ್ಯಗಳನ್ನು ಕೊಡುತ್ತೀರಿ ? ಹಾಗೂ ಹೀಗೆ ಫಲಾನುಭವಿಗಳ ಸಂಖ್ಯೆ ಪ್ರತಿ ವರ್ಷಕ್ಕೂ ಕಡಿಮೆಯಾಗುತ್ತಾ ಬರುತ್ತಿರುವುದು ಸರಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಜಿ. ಬಸವಣ್ಣೆಪ್ಪ.—ಅಧ್ಯಕ್ಷರೇ, ಈ ಯೋಜನೆಯಡಿಯಲ್ಲಿ ಪ್ರತಿಯೊಬ್ಬ ಫಲಾನುಭವಿಗೂ ಒಂದು ಗ್ರಾಂ ೨೨ ಕ್ಯಾರೆಟ್ ಚಿನ್ನದ ತಾಳಿಯನ್ನು ಕೊಡುತ್ತೇವೆ. ಅಂದರೆ ಚಿನ್ನದ ತಾಳಿಯನ್ನು ಕೊಡುತ್ತೇವೆ. ಇಲ್ಲದಿದ್ದರೆ ೨೦೦ ರೂಪಾಯಿಗಳನ್ನು ಕೊಡುತ್ತೇವೆ. ಹಾಗೆಯೇ ೧೦೦ ರೂಪಾಯಿ ಗಳ ಸೀರೆ ಮತ್ತು ಕುಪ್ಪಸಕ್ಕಾಗಿಯೂ ಮತ್ತು ೫೦ ರೂಪಾಯಿಗಳನ್ನು ದೋತಿಗಾಗಿಯೂ, ಒಟ್ಟಿನಲ್ಲಿ ೩೫೦ ರೂಪಾಯಿಗಳ ಬೆಲೆ ಬಾಳತಕ್ಕಂಥ ವಸ್ತುಗಳನ್ನು ಕೊಡುತ್ತೇವೆ.

ಶ್ರೀ ಬಿ. ಎಸ್. ಯಡಿಯೂರಪ್ಪ —ಇದರಲ್ಲಿನ ಫಲಾನುಭವಿಗಳ ಸಂಖ್ಯೆಯನ್ನು ನೋಡಿದರೆ ಮೊದಲನೇ ವರ್ಷ ೨,೫೭೩ ಜನರಿದ್ದರೆ, ಆಮೇಲೆ ೨೯೫೩ ಜನ ಇದರ ಲಾಭವನ್ನು ಪಡೆದುಕೊಂಡಿದ್ದಾರೆ ಅನಂತರ ನವೆಂಬರ್ ೧೯೮೭ರ ವರೆಗೆ ೨,೦೩೮ ಜನರು ಲಾಭಾರ್ಥಿಗಳು ಇರುವುದು ಕಂಡುಬರುತ್ತದೆ. ಅಂದರೆ ಲಾಭಾರ್ಥಿಗಳ ಸಂಖ್ಯೆ ಕಡಿಮೆಯಾಗುತ್ತಾ ಬಂದಿದೆ. ಇಂತಹ ಯೋಜನೆಯ ಮೂಲಕ ಬಡವರಿಗೆ ಅನುಕೂಲವಾಗಬೇಕೆಂಬುದು ನಿಮ್ಮ ಉದ್ದೇಶ ಮತ್ತು ಹಾಗೆ ತಾವು ಹೇಳಿಕೊಳ್ಳುತ್ತಿದ್ದೀರಿ. ಒಂದು ವೇಳೆ ಈ ಕಾರ್ಯಕ್ರಮವನ್ನು ಪ್ರಾಮಾಣಿಕವಾಗಿ ಜಾರಿಗೆ ಕೊಟ್ಟಿದ್ದರೆ, ಫಲಾನುಭವಿಗಳ ಸಂಖ್ಯೆ ೧೦ ಸಾವಿರಕ್ಕೂ ಮೀರಬೇಕಾಗಿತ್ತು. ಸಂಖ್ಯೆ ಕಡಿಮೆಯಾಗಲು ಕಾರಣ ಎಂದರೆ, ಇದರ ವಿತರಣೆ ಮತ್ತು ಪ್ರಯೋಜನವು ಬಡವರಿಗೆ ಸರಿಯಾಗಿ ಕೊಟ್ಟಿಲ್ಲದಿರುವುದೇ ಆಗಿರುತ್ತದೆ. ನಾನು ಕೂಡ ಹಲವಾರು ಕಡೆಗಳಲ್ಲಿ ಶಾಸಕನಾಗಿ ಇಂತಹ ಸಮಾರಂಭಗಳಲ್ಲಿ ಭಾಗವಹಿಸಿದ್ದೇನೆ. ಅಂತಹ ಕಡೆಗಳಲ್ಲಿ ೧೮ ಜೊತೆ ಮದುವೆ ಆಗುವವರಿದ್ದಾರೆಂದು ಕಂಡು ಬಂದರೂ ಕೂಡ ನಿಮ್ಮ ಅಧಿಕಾರಿಗಳ ೧೬ ಅಥವಾ ೧೭ ತಾಳಿಗಳನ್ನು ತರಿಸುತ್ತಾರೆ. ಹೀಗೆ ಮದುವೆಗಾಗಿ ಹೆಸರು ನೊಂದಾಯಿಸಿದವರು ಕೂಡ ಎಷ್ಟೊ ಸಂದರ್ಭಗಳಲ್ಲಿ ಬಂದಿರುವುದಿಲ್ಲ. ಹಾಗೆಯೇ ನಿಮ್ಮ ಅಧಿಕಾರಿಗಳು ಯಾರಾದರೂ ಹೆಸರನ್ನು ನಮೂದಿಸಿಕೊಂಡು ಇಂತಹ ಬಡಜನರಿಗಾಗಿ ಇರುವ ಸೌಲಭ್ಯದ ಹಣವನ್ನು ತಿಂದು ಹಾಕಿರುವ ಅನೇಕ ಪ್ರಕರಣಗಳೂ ಉಂಟು. ಇಂತಹ ಒಂದು ದುರ್ವ್ಯವಹಾರವನ್ನು ತಡೆಗಟ್ಟುವಲ್ಲಿ ನಿಮ್ಮ ಒಂದು ಬಿಗಿಯಾದ ಕ್ರಮ ಏನು ? ಮತ್ತು ಯಾವ ರೀತಿಯಲ್ಲಿ ಇದರ ಪ್ರಯೋಜನವನ್ನು ಜನರಿಗೆ ತಲುಪಿಸುತ್ತೀರಿ ? ಇದರ ಉಸ್ತುವಾರಿಯನ್ನು ಯಾವರೀತಿಯಾಗಿ ಮಾಡುತ್ತಾ ಇದ್ದೀರಿ ?

ಶ್ರೀ ಜಿ. ಬಸವಣ್ಣೆಪ್ಪ.—ಅಧ್ಯಕ್ಷರೇ, ಈ ಯೋಜನೆಯು ೧೫-೮-೧೯೮೮ ರಿಂದ ಪ್ರಾರಂಭವಾಯಿತು. ಇಲ್ಲಿಯವರೆಗೆ ೭ ಲಕ್ಷ ಜೋಡಿ ಮದುವೆಗಳನ್ನು ಯೋಜನೆಯಡಿಯಲ್ಲಿ ಮಾಡಲಾಗಿದೆ. ಈ ಕಾರ್ಯಕ್ರಮಕ್ಕೆ ಹೆಚ್ಚಾಗಿ ಜನರು ಬರುತ್ತಾ ಇಲ್ಲ ಎಂದು ಮಾನ್ಯ ಸದಸ್ಯರು ಹೇಳುತ್ತಾ ಇದ್ದಾರೆ. ಇಂತಹ ಒಂದು ಕಾರ್ಯಕ್ರಮವನ್ನು ಮಾಡಬೇಕಾದರೆ ಕನಿಷ್ಠ ೧೦ ಜೋಡಿ ಇರಬೇಕೆಂದು ಮಾಡಿದ್ದೇವೆ.

ಜೋಡಿಗಳನ್ನು ಸರಿ ಮಾಡುವ ಬಗ್ಗೆ ದೂರುಗಳು ಬಂದಿವೆ. ಕೆಲವು ಕಡೆ ೫ ಜೋಡಿಗಳು ಸಿಗುತ್ತವೆ, ಕೆಲವು ಕಡೆ ೬ ಜೋಡಿಗಳು ಸಿಗುತ್ತವೆ. ೧೦ ಜೋಡಿಗಳು ಸಿಗುವುದು ಬಹಳಕಷ್ಟವಾಗಿರುತ್ತದೆ ಎನ್ನುವ ದೂರುಗಳು ಇವೆ. ಈ ವಿಷಯು ಸರ್ಕಾರದ ಗಮನಕ್ಕೂ ಕೂಡ ಬಂದಿದೆ. ಆದರೆ ಇದರಲ್ಲಿ ಯಾವುದೇ ರೀತಿಯ ಅವ್ಯವಹಾರಗಳು ಆಗುವಂತಹ ಅವಕಾಶಗಳು ಇಲ್ಲ. ಮಾನ್ಯ ಸದಸ್ಯರು ಹೇಳಿದುದು ಸತ್ಯಕ್ಕೆ ದೂರವಾದ ಮಾತು. ನಮಗೆ ಬಂದಿರತಕ್ಕ ವರದಿಯ ಪ್ರಕಾರ ಸೌತ್ ಕೆನರಾದಲ್ಲಿ ನಾರ್ತ್ ಕೆನರಾದಲ್ಲಿ ಬಿಜಾಪುರ ಹಾಗೂ ಹಾಸನ ಜಿಲ್ಲೆಗಳಲ್ಲಿ ಆಗಬೇಕಾಗಿದ್ದಷ್ಟು ಹಣ ಖರ್ಚು ಆಗಿಲ್ಲ. ಈ ಬಗ್ಗೆ ಈಗ ಜಿಲ್ಲಾ ಪರಿಷತ್ತಿನವರಿಗೆ ಅಧಿಕಾರವನ್ನು ಕೊಟ್ಟಿದ್ದೇವೆ. ಜಿಲ್ಲಾ ಪರಿಷತ್ತಿನವರು ಮಂಡಲ ಪಂಚಾಯಿತಿಗಳ ಮುಖಾಂತರ ಕೆಲಸ ಮಾಡಬೇಕಾಗುತ್ತದೆ. ಈ ಕಾರ್ಯ ಇನ್ನು ಮುಂದಾದರೂ ಪರಿಣಾಮಕಾರಿಯಾಗಿ ನಡೆಯುವ ಬಗೆ ನಮಗೆ ವಿಶಾ ಸವಿದೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಮಾನ್ಯ ಅಧ್ಯಕ್ಷರೇ ಮಾನ್ಯ ಮಂತ್ರಿಗಳು ಕೊಟ್ಟಿರುವ ಉತ್ತರದಲ್ಲಿ ನೋಡಿದರೆ ಗೊತ್ತಾಗುತ್ತದೆ. ಕೆಲವು ಕಡೆ ಹೆಚ್ಚು ಹಣ ಖರ್ಚಾಗಿದೆ, ಕೆಲವು ಕಡೆ ಹಣ ಖರ್ಚು ಆಗಿಲ್ಲ. ಈ ತಾಳಿ ಭಾಗ್ಯ ಯೋಜನೆ ಒಂದು ಪ್ರಚಾರ ಮಾಧ್ಯಮವಾಗಿದೆಯೇ ಹೊರತು ನಿಜವಾಗಿ ಬಡವರಿಗೆ ಇದರಿಂದ ಪ್ರಯೋಜನವಾಗಿಲ್ಲ.

ಶ್ರೀ ಜಿ. ಬಸವಣ್ಣಪ್ಪ —ಮಾನ್ಯ ಅಧ್ಯಕ್ಷರೇ ನಾನು ಈಗಾಗಲೇ ಹೇಳಿದ್ದೇನೆ. ಕೆಲವು ಜಿಲೆಗಳಲ್ಲಿ ಹಣ ಖರ್ಚು ಆಗಿಲ್ಲ. ಇನ್ನು ಕೆಲವು ಜಿಲ್ಲೆಗಳಲ್ಲಿ ಹೆಚ್ಚು ಹಣ ಖರ್ಚಾಗಿದೆ. ಈ ಯೋಜನೆ ಈಗ ಜಿಲ್ಲಾ ಪರಿಷತ್ತಿನ ವ್ಯಾಪ್ತಿಯಲ್ಲಿದೆ. ಅವರ ಕೈಯಲ್ಲಿ ಹಣ ಇದೆ. ಈ ಯೋಜನೆಯನ್ನು ಜಾರಿಗೆ ತಂದ ಉದ್ದೇಶವೇ ಬೇರೆ. ಈ ಯೋಜನೆಯಿಂದ ಯಾರಿಗೂ ತೊಂದರೆಯಾಗಿಲ್ಲ ಅನುಕೂಲವೇ ಜಾಸ್ತಿಯಾಗಿದೆ. ನಮ್ಮ ಒಂದು ನಿಯಮದ ಪ್ರಕಾರ ೧೦ ಜೋಡಿಗಳಿದ್ದರೆ ಈ ಯೋಜನೆ ಅನ್ವಯ ವಾಗುತ್ತದೆ. ಆದರೆ ೧೦ ಜೋಡಿಗಳು ಸಿಗುವುದು ಸ್ವಲ್ಪ ಕಷ್ಟವಾಗಿದೆ.

ಶ್ರೀ ಎಂ. ಎಸ್. ಕೃಷ್ಣನ್.—ಮಾನ್ಯ ಅಧ್ಯಕ್ಷರೇ ೧೦ ಜೋಡಿಗಳನ್ನು ಹುಡುಕಿಕೊಂಡು ಬರುವುದು ಕಷ್ಟದ ಕೆಲಸವೇ. ಇಂತಹ ಭಾಗ್ಯಕ್ಕೆ ತಾಳಿಭಾಗ್ಯ ಯೋಜನೆ ಇರಬೇಕೆಂದೇನು ಇಲ್ಲ. ಈ ಯೋಜನೆಯನ್ನು ನಿಲ್ಲಿಸಿ ಬೇರೆ ಯೋಜನೆಗಳಿಗೆ ಆ ಹಣವನ್ನು ಉಪಯೋಗಿಸಿಕೊಳ್ಳಿ. ಇಲ್ಲದಿದ್ದರೆ ಈ ಯೋಜನೆಯ ನಿಯಮಗಳನ್ನಾದರೂ ಬದಲಾವಣೆ ಮಾಡಿ. ಯಾರು ಅರ್ಜಿ ಹಾಕಿಕೊಳ್ಳುತ್ತಾರೋ ಅವರಿಗೆಲ್ಲಾ ಒಂದೊಂದು ತಾಳಿ ಕೊಡುವಂತೆ ತೀರ್ಮಾನ ಮಾಡಿ.

ಶ್ರೀ ಜಿ. ಬಸವಣ್ಣಪ್ಪ.—ಮಾನ್ಯ ಅಧ್ಯಕ್ಷರೇ ಈ ಯೋಜನೆಯನ್ನು ಜಾರಿಗೆ ತರುವಾಗ ಸರ್ಕಾರ ಒಳ್ಳೆಯ ಉದ್ದೇಶವನ್ನಿಟ್ಟುಕೊಂಡು ಜಾರಿಗೆ ತಂದಿದೆ. ನಮ್ಮ ನಾಡಿನ ಸಂಪ್ರದಾಯದಲ್ಲಿ ಮದುವೆ ಯಾಗುವುದಂಬಹಳ ಕಷ್ಟ. ಗಂಡು ಅಥವಾ ಹೆಣ್ಣಿನ ಕಡೆಯವರಿಗೆ ಎರಡು ಎಕರೆ ಜಮೀನು ಇದ್ದರೆ ಆ ಜಮೀನು ಮೂರಾಟ ಮಾಡಿ ಕೊನೆಗೆ ಬೀದಿ ಪಾಲಾಗಿರುವ ಸಾವಿರಾರು ಕುಟುಂಬಗಳು ಇವೆ. ಆ ಪರಿಸ್ಥಿತಿಯನ್ನು ಸರ್ಕಾರ ಗಮನಿಸಿ ಈ ಒಂದು ಯೋಜನೆಯನ್ನು ಜಾರಿಗೆ ತಂದಿದೆ. ಈ ಯೋಜನೆ ಯಿಂದ ಸವಾರು ೭೮೦೦ ಕುಟುಂಬಗಳಿಗೆ ಅನುಕೂಲವಾಗಿದೆ.

ಶ್ರೀ ಎಂ. ಎಸ್. ಕೃಷ್ಣನ್.—ಈ ಯೋಜನೆ ಬರೀ ಪ್ರಚಾರಕ್ಕೆ ಮಾತ್ರ ಇಟ್ಟುಕೊಂಡರೆ ನಿಜವಾದ ಬಡವನಿಗೆ ಉಪಯೋಗವಾಗುತ್ತಿಲ್ಲ.

ಶ್ರೀ ಜಿ. ಬಸವಣ್ಣಪ್ಪ.—ಸರ್ಕಾರದ ಒಳ್ಳೆಯ ಉದ್ದೇಶವನ್ನು ಮಾನ್ಯ ಸದಸ್ಯರು ಅರ್ಥ ಮಾಡಿಕೊಳ್ಳಬೇಕು.

ಶ್ರೀ ಆರ್. ವೆಂಕಟರಾವಯ್ಯ. —ಮಾನ್ಯ ಅಧ್ಯಕ್ಷರೇ ಮಾನ್ಯ ಮಂತ್ರಿಗಳೇ ಹೇಳಿದರು ಬಡ ಜನರಿಗೆ ಸಹಾಯ ಮಾಡಿದ್ದೇವೆಂದು. ಆದರೆ ಈ ಯೋಜನೆಯನ್ನು ಯಾರು ಮಾಡುತ್ತಿದ್ದಾರೆ ಎಂದರೆ, ತಮ್ಮ ಸ್ವಪ್ರತಿಷ್ಠೆಯನ್ನು ಬೆಳೆಸಿ ಕೊಳ್ಳುವುದಕ್ಕಾಗಿ ಶ್ರೀ ಎಂ. ಎಸ್. ರಾಮಯ್ಯನಂತಹವರು ಮಂತಾಧಿಪತಿಗಳು ಮಾಡುತ್ತಿದ್ದಾರೆ. ನಮ್ಮ ಕೋಲಾರ ಜಿಲ್ಲೆಯಲ್ಲಿ ಒಂದೆರಡು ಕಡೆ ಮಾನ್ಯ ಎಂ. ಎಸ್. ರಾಮಯ್ಯನವರು ತಮ್ಮ ಸ್ವಪ್ರತಿಷ್ಠೆಯನ್ನು ಬೆಳೆಸಿಕೊಳ್ಳುವ ಸಲುವಾಗಿ ಅರೇಂಜ್ ಮಾಡಿದ್ದರು ಆಗ ಸರ್ಕಾರದ ಅಧಿಪತಿಗಳು ಬಂದು ಬಡ ಜನರಿಗೆ ತಾಳಿಗಳನ್ನು ಕೊಟ್ಟರು. ಇದರಿಂದೇನಾಗುತ್ತದೆಂದರೆ ಸರ್ಕಾರಕ್ಕೆ ಪ್ರಚಾರ ಸಿಕ್ಕುತ್ತಾಗುತ್ತದೆ. ನಿಜವಾಗಿ ಬಡವರಿಗೆ ಅನುಕೂಲವಾಗಬೇಕೆಂದಿದ್ದರೆ ನಿಮ್ಮ ಮಿತಿ ೧೦ ರಿಂದ ಒಂದು ಅಥವಾ ಎರಡು ಜೋಡಿ ಸಿಕ್ಕಿದರೂ ಸಹ ಅವರಿಗೆ ನಾವು ತಾಳಿಭಾಗ್ಯ ವನ್ನು ಕೊಡುತ್ತೇವೆಂದು ಮಾಡಿ. ಆಗ ಬಡವರಿಗೆ ಸಹಾಯ ಮಾಡಿದಂತಾಗುತ್ತದೆ.

ಶ್ರೀ ಜಿ. ಬಸವಣ್ಣಪ್ಪ.—ಮಾನ್ಯ ವೆಂಕಟರಾವಯ್ಯನವರು ಹೇಳುವುದು ಸತ್ಯಕ್ಕೆ ದೂರವಾದ ಮಾತು. ಕೆಲವು ಫಿಲಾಂತ್ರಪಿಸ್ಟ್ ಮಂತಾದಿಪತಿಗಳು ಇರುತ್ತಾರೆ. ಉದಾಹರಣೆಗೆ ಧರ್ಮಸ್ಥಳದ ಶ್ರೀ ವೀರೇಂದ್ರ ಹೆಗಡೆಯವರು ಪ್ರತಿ ಸಲ ಸಾವಿರಾರೂ. ನೂರು ಸಾವಿರಾರು ಸಾಮೂಹಿಕ ಮದುವೆಗಳನ್ನು ಮಾಡುತ್ತಾರೆ, ಮಾನ್ಯ ರಾಮಯ್ಯನವರು ಕೂಡಾ ಅವರ ಸ್ವಂತ ಖರ್ಚಿನಿಂದ ಮಾಡುತ್ತಾರೆ. ಕೆಲವರು ಫಿಲಾಂತ್ರ ಪಿಸ್ಟ್ ಮಾಡುತ್ತಾರೆ. ನಾವು ಹಸಿರುಕಾರ್ಡ್ ಹೊಂದಿರತಕ್ಕಂಥ ಬಡವರಿಗೆ ಮಾಡತಕ್ಕಂಥದ್ದು ಈ ಕಾರ್ಯಕ್ರಮ. ನಾವು ಇದರಲ್ಲಿ ದೊಡ್ಡವರನ್ನ ಇನ್‌ವಾಲ್ವ್ ಮಾಡುವುದಿಲ್ಲ. ಮತ್ತು ಅವರ ಸಹಾಯವನ್ನು ಕೂಡ ಪಡೆದುಕೊಳ್ಳುವುದಿಲ್ಲ. ಮಾಡುವುದಾದರೆ ಪ್ರತ್ಯೇಕವಾಗಿಯೇ

ಮಾಡುತ್ತೇವೆ, ಮತ್ತೆ ೧೦ ಜೋಡಿ ಇದ್ದದ್ದು ಎರಡಕ್ಕೆ ಇಳಿಸಬೇಕು ಎಂದು ಹೇಳಿದ್ದಾರೆ, ಇದು ಸರಿಯಲ್ಲ. ಸರ್ಕಾರದ ಕಾರ್ಯಕ್ರಮ ಹೆಸ್ರು ಎಂದು ಇದೆ, ಅದು ಇರಬೇಕು.

ಶ್ರೀ ಆರ್ ವೆಂಕಟರಾಮಯ್ಯ.—ಕೊನೆಯ ಪಕ್ಷ ಐದು ಜೋಡಿಯನ್ನಾದರೂ ಇರಬೇಕೆಂದು ಮಾಡಿ

ಶ್ರೀ ಬಿ. ಎಸ್. ಯಡಿಯೂರಪ್ಪ.—ನಾನು ಈ ಯೋಜನೆ ಸರಿಯಲ್ಲ ಎಂದು ಹೇಳುವುದಿಲ್ಲ ಬೀದರ್‌ನಲ್ಲಿ ಒಂದು ಜೋಡಿಗೂ ಕೂಡಾ ತಾಳಿ ಕೊಟ್ಟಿಲ್ಲ. ಅದೇ ರೀತಿ ಮಂಡ್ಯ, ಮಂಗಳೂರು ಮತ್ತು ತುಮಕೂರು ಜಿಲ್ಲೆಗಳಲ್ಲಿ ಈ ಯೋಜನೆಗೆ ಯಾರೂ ಮುಂದೆ ಬರುತ್ತಿಲ್ಲ. ಇದರ ಬಗ್ಗೆ ಅಧಿಕಾರಿಗಳು ಸರಿಯಾಗಿ ಗಮನವನ್ನು ಕೊಟ್ಟಿದ್ದಾರೆಯೇ ? ಈ ಯೋಜನೆಯ ಸೌಲಭ್ಯವನ್ನು ಪಡೆಯಲು ಹತ್ತಾರು ಜನರನ್ನು ಕಟ್ಟಿಕೊಂಡು ಗಾಡಿ ಕಟ್ಟಿಕೊಂಡು ಹಳ್ಳಿಗಾಡುಗಳಿಂದ ಬರುತ್ತಾರೆ. ನಿಜವಾಗಿಯೂ ಅವರಿಗೆ ಸರಿಯಾದ ಅನುಕೂಲವನ್ನು ಮಾಡುತ್ತಿದ್ದೀರಾ ? ಈ ಕಾರ್ಯಕ್ರಮದ ಅಡಿಯಲ್ಲಿ ನಾಲ್ಕೈದು ಜಿಲ್ಲೆಗಳಲ್ಲಿ ಯಾರು ಮುಂದೆ ಬರುತ್ತಿಲ್ಲ. ಈ ಯೋಜನೆಯಿಂದ ಹೆಚ್ಚಿನ ಬಡವರಿಗೆ ಅನುಕೂಲವಾಗಬೇಕು. ಇನ್ನು ಬಡವರಿಗೆ ಇದರಿಂದ ಹೆಚ್ಚಿನ ಅನುಕೂಲವನ್ನು ಮಾಡಿಕೊಡುವುದರ ಬಗ್ಗೆ ಇಲ್ಲಿ ನಡೆಯುತ್ತಿರುವ ಕೆಲವೊಂದು ಅವ್ಯವಹಾರವನ್ನು ನಿಲ್ಲಿಸುವ ಬಗ್ಗೆ ಏನಾದರೂ ಒಂದು ನಿರ್ದಿಷ್ಟವಾದ ಕಾರ್ಯಕ್ರಮವನ್ನು ಹಾಕಿಕೊಳ್ಳುತ್ತೀರಾ ?

ಶ್ರೀ ಜಿ. ಬಸವಣ್ಣಪ್ಪ.—ನಿನ್ನೆಯ ದಿವಸ ಅಧಿಕಾರಿಗಳ ಸಭೆಯನ್ನು ಕರೆದಿದ್ದೇನೆ. ಇದನ್ನು ರಿವ್ಯೂ ಮಾಡಿದ್ದೇನೆ. ನಾಲ್ಕೈದು ಜಿಲ್ಲೆಗಳಲ್ಲಿ ಒಂದು ಕೂಡಾ ಕೊಟ್ಟಿಲ್ಲ. ನನ್ನ ಅಧಿಕಾರಿಗಳಿಗೂ ಸಹಾ ಎಚ್ಚರಿಕೆಯನ್ನು ಕೊಟ್ಟಿದ್ದೇನೆ ಎಲ್ಲಿ ತಪ್ಪು ಇದೆ, ಎಲ್ಲಿ ಜನಗಳು ಬರುತ್ತಿಲ್ಲವೋ ಇದರ ಬಗ್ಗೆ ಸರಿಯಾದ ಕಾರ್ಯಕ್ರಮವನ್ನು ಹಾಕಿಕೊಂಡಿದ್ದಾರೆಯೇ ಸರಿಯಾದ ಪ್ರಚಾರವನ್ನು ಮಾಡಿಲ್ಲವೆ? ಏನು ಎನ್ನುವ ಬಗ್ಗೆ ಸವಿಸ್ತಾರವಾಗಿ ಚರ್ಚೆ ಮಾಡಿದೆ. ಇಷ್ಟೇ ಗಂಭೀರವಾಗಿ ಈ ನಾಲ್ಕು ಜಿಲ್ಲೆಯಲ್ಲಿ ತಾಳಿಭಾಗ್ಯ ಯೋಜನೆಯಲ್ಲಿ ಏನು ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕೋ ಅದರ ಬಗ್ಗೆಯೂ ಕೂಡಾ ಕ್ರಮವನ್ನು ತೆಗೆದುಕೊಂಡಿದ್ದೇನೆ. ಇದರ ಬಗ್ಗೆ ಸರಿಯಾದ ವಿವರವನ್ನು ಕೊಡುತ್ತೇನೆ. ಇದು ಸರ್ಕಾರದ ಕಾರ್ಯಕ್ರಮ ಆದರೂ ಸಹಾ ಅಲ್ಲಿ ಏನೂ ಇದರ ಉಪಯೋಗ ಮಾಡಿಕೊಂಡಿಲ್ಲದಿದ್ದರೆ ಏತಕ್ಕೆ ಮಾಡಿಕೊಂಡಿಲ್ಲ ಇದರಲ್ಲಿ ನಮ್ಮ ಅಧಿಕಾರಿಗಳ ತಪ್ಪು ಏನಾದರೂ ಇದೆಯೇ ? ಈ ಕಾರ್ಯಕ್ರಮದ ಬಗ್ಗೆ ಜನರಲ್ಲಿ ಸರಿಯಾದ ತಿಳುವಳಿಕೆ ಇಲ್ಲವೆ ? ಇದನ್ನೆಲ್ಲಾ ನಾನು ರಿವ್ಯೂ ಮಾಡಿದ್ದೇನೆ. ಮಾನ್ಯ ಸದಸ್ಯರಾದ ಯಡಿಯೂರಪ್ಪನವರು ಇದರ ಬಗ್ಗೆ ಸರ್ಕಾರದ ಗಮನಕ್ಕೆ ತಂದಿದ್ದಾರೆ, ಅಷ್ಟೇ ಕಳಕಳಿಯಿಂದ ನಾನು ಅದರ ಬಗ್ಗೆ ಗಮನವನ್ನು ಹರಿಸಿದ್ದೇನೆ. ಇದರ ಬಗ್ಗೆ ಕೆಲವು ಸಲಹೆ ಸೂಚನೆಗಳನ್ನು ಮಾಡಿದ್ದೀರಿ, ನಾನು ಅದರ ಬಗ್ಗೆ ಗಮನವನ್ನು ಹರಿಸುತ್ತೇನೆ.

ಶ್ರೀ ಎಂ. ಎಸ್. ಕೃಷ್ಣನ್.—ನಿನ್ನೆ ದಿವಸವೂ ಸಹಾ ಈ ಮನೆಯಲ್ಲಿ ಈ ವಿಷಯದ ಬಗ್ಗೆ ಚರ್ಚೆಯಾಗಿದೆ. ತಾಳಿ ಕೊಡುವ ಬದಲಿಗೆ ನ್ಯಾಷನಲ್ ಸೇವಿಂಗ್ಸ್ ಸರ್ಟಿಫಿಕೇಟ್ ಕೊಡುತ್ತಿದ್ದಾರೆ ಎಂದು ದೂರು ಬಂದಿದೆ. ಅದರ ಬಗ್ಗೆ ತಾವು ಏನಾದರೂ ಎನ್‌ಕ್ವೈರಿಯನ್ನು ಮಾಡಿದ್ದೀರಾ? ಈ ತರಹ ಎಷ್ಟು ಪ್ರಕರಣಗಳು ನಡೆದಿವೆ ? ಅದಕ್ಕೆ ಪರಿಹಾರವೇನು ?

ಶ್ರೀ ಜಿ. ಬಸವಣ್ಣಪ್ಪ.—೨೦೦ ಕ್ಯಾರೆಟ್ ಇರುವ ತಾಳಿ ಬೇಡ ಎಂದರೆ ಅದರ ಬದಲಿಗೆ ಎರಡು ನೂರು ರೂಪಾಯಿಯ ನ್ಯಾಷನಲ್ ಸೇವಿಂಗ್ಸ್ ಸರ್ಟಿಫಿಕೇಟನ್ನು ಕೊಡುತ್ತಿದ್ದೇವೆ.

ಶ್ರೀ ಯು. ಭೂಪತಿ.—ತಾವು ಕೊಡುವ ಪಣದಲ್ಲಿ ಈ ತಾಳಿ ಭಾಗ್ಯ ಯೋಜನೆಯಲ್ಲಿ ಬಂಗಾರದ ತಾಳಿ ಬರುವುದಿಲ್ಲ. ಅದು ಬರುವುದಕ್ಕೂ ಸಾಧ್ಯ ಇಲ್ಲ. ಎರಡು ಗ್ರಾಮ ತಾಳಿ ಕೊಡುವುದಕ್ಕೂ ಸಾಧ್ಯ ಇಲ್ಲ. ನಾನು ಹೊಸಪೇಟೆ ತಾಲ್ಲೂಕು ಪಂಚಾಯಿತಿ ಸಮಿತಿಯ ಮುಂದೆ ಹೋಗಿದ್ದೆ. ಅಲ್ಲಿಯ ಯುವಕ ಸಂಘದವರು ಮುಂಡಳಿಯ ಪ್ರಧಾನರಿಗೆ ಹೇಳಿ ಒಂದೊಂದು ಜೊತೆ ಕಳುಹಿಸಿಕೊಡಿ ಎಂದು ಹೇಳಿದರು. ನಾನು ಕೂಡಾ ಒಂದೊಂದು ಜೋಡಿಗಳನ್ನು ಕಳುಹಿಸಿಕೊಡಿ ಎಂದು ಪ್ರಧಾನರಿಗೆ ಹೇಳಿದೆ. ನಂತರ ಏನು ಆಯಿತು ಎಂದರೆ ಅಲ್ಲಿನ ಬಿ.ಡಿ.ಓ, ಅವರು ನಮಗೆ ತಾಳಿ ಕೊಡುವುದಕ್ಕೆ ಆಗುವುದಿಲ್ಲ, ನ್ಯಾಷನಲ್ ಸೇವಿಂಗ್ಸ್ ಸರ್ಟಿಫಿಕೇಟ್ ಕೊಡುತ್ತೇವೆ ಎಂದು ಹೇಳಿದರು, ಅದನ್ನೇ ಕೊಡಿ ಎಂದು ಹೇಳಿ ಬಂದೆ. ಇದು ಈ ರೀತಿ ಅದರಲ್ಲಿ ಆ ಹಣ ಬಹಳ ಕಡಿತ ಇದೆ. ಇದು ಆಗುವುದಿಲ್ಲ.

ಇದನ್ನು ಸ್ವಲ್ಪ ಜಾಸ್ತಿ ಮಾಡಿದರೆ ಸಾಧ್ಯವಾಗುತ್ತದೆ. ಇಲ್ಲದೆ ಹೋದರೆ ಇದು ಪ್ರಯೋಜನವಾಗುವುದಿಲ್ಲ.

ಶ್ರೀ ಜಿ. ಬಸವಣ್ಣೆಪ್ಪ.—ಮಾನ್ಯ ಶ್ರೀ ಯಡಿಯೂರಪ್ಪನವರು ಕೇಳಿದ ಪ್ರಶ್ನೆಗೆ ಎಲ್ಲ ಉತ್ತರವನ್ನು ಕೊಟ್ಟಿದ್ದೇನೆ ಮತ್ತು ಸುಧಾರಣೆ ಮಾಡಿಸುತ್ತೇನೆಂದು ಸಹಾ ಹೇಳಿದ್ದೇನೆ.

ಶ್ರೀ ಎಂ. ಎಸ್. ಕೃಷ್ಣನ್.—ಹಿತ್ತಾಳೆ ತಾಳಿ ಕೊಡುವುದಕ್ಕೆ ಹೇಳಿ ಸ್ವಾಗತ ಮಾಡುತ್ತೇವೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಮಾನ್ಯ ಮಂತ್ರಿಗಳಲ್ಲಿ ಕೊನೆಯವರಾಗಿ ಒಂದೇ ಒಂದು ಪ್ರಶ್ನೆ. ಈ ತಾಳಿಭಾಗ್ಯ ಯೋಜನೆ ಬಹಳ ಪಾಪ್ಯುಲರ್ ಪ್ರೋಗ್ರಾಂ ಆಗಿದೆ ಎಂದು ಹೇಳಿತ್ತಿದ್ದೀರಿ, ಸರ್ಕಾರದವರು ಬಂಗಾರದ ಬೆಲೆ ಜಾಸ್ತಿ ಆಯಿತು ಎನ್ನುವ ಒಂದೇ ಒಂದು ಕಾರಣಕೋಸ್ಕರ ತಾಳಿಯನ್ನು ಕೊಡುವ ಬದಲು ನ್ಯಾಷನಲ್ ಸೇವಿಂಗ್ಸ್ ಸರ್ಟಿಫಿಕೇಟನ್ನು ಕೊಡುವುದಾದರೆ ನಿಮ್ಮ ಯೋಜನೆಗೆ ಅರ್ಥ ಇರುವುದಿಲ್ಲ. ನೀವು ಹೆಸರಿಗೆ ದುಡ್ಡು ಕೊಡುವುದಾದರೆ ಈ ಯೋಜನೆ ನಿರರ್ಥಕವಾಗುತ್ತದೆ. ಬಡವರ ಬಗ್ಗೆ ನಿಮಗೆ ಕಳಕಳಿ ಇದ್ದರೆ ತಾಳಿಯನ್ನು ಕೊಡಿ ನಾಷನಲ್ ಸೇವಿಂಗ್ಸ್ ಸರ್ಟಿಫಿಕೇಟನ್ನು ಕೊಡುವುದು ಬೇಡ. ನಿಮ್ಮ ಕೈಯಲ್ಲಿ ಇದು ಮಾಡವುದಕ್ಕೆ ಸಾಧ್ಯವಾಗದಿದ್ದರೆ ಈ ಪ್ರೋಗ್ರಾಮನ್ನು ವಾಪಸ್ಸು ತೆಗದುಕೊಳ್ಳಿ. ಇಲ್ಲವಾದರೆ ಆ ಬಡವರಿಗೆ ತಾಳಿಯನ್ನು ಕೊಡಿ, ನೀವು ನ್ಯಾಷನಲ್ ಸೇವಿಂಗ್ಸ್ ಸರ್ಟಿಫಿಕೇಟನ್ನು ಕೊಡುವುದಾದರೆ ಈ ಕಾರ್ಯಕ್ರಮವನ್ನು ವಿತ್‌ಡ್ರಾ ಮಾಡಿಕೊಳ್ಳಿ.

ಶ್ರೀ ಬಸವಣ್ಣೆಪ್ಪ.—ಸರ್ಕಾರ ಬಡವರ ಬಗ್ಗೆ ಅಪಾರವಾದ ಕಳಕಳಿಯನ್ನು ಇಟ್ಟುಕೊಂಡಿರುವುದರಿಂದ ಇಂಥ ಕಾರ್ಯಕ್ರಮಗಳನ್ನೆಲ್ಲಾ ರೂಪಿಸಿದ್ದೇವೆ. ಅನೇಕ ಕಾರ್ಯಕ್ರಮಗಳನ್ನು ನಾವು ಜಾರಿಯಲ್ಲಿ ಕೂಡ ತಂದಿದ್ದೇವೆ.

ಶ್ರೀ ವೇದಾಂತ ಹೆಮ್ಮಿಗೆ.—ನ್ಯಾಷನಲ್ ಸೇವಿಂಗ್ಸ್ ಸರ್ಟಿಫಿಕೇಟನ್ನು ತಾಳೀ ತರಹ ಕಟ್ಟಲಿಕ್ಕೆ ಸಾಧ್ಯವೇ ?

೯-೩೦ ಎ.ಎಂ.

ಶ್ರೀ ಜಿ. ಬಸವಣ್ಣೆಪ್ಪ.—ನಾನು ಒಪ್ಪುತ್ತೇನೆ. ಬಂಗಾರದ ಬೆಲೆ ಜಾಸ್ತಿಯಾಗಿದೆ. ಆದರೂ ಇದರ ಬಗ್ಗೆ ಪರಿಶೀಲಿಸುತ್ತೇನೆ.

ಶ್ರೀ ಜ್ಞಾನದೇವ ಎಸ್. ದೊಡ್ಡಮೇಟಿ.—ಈ ತಾಳಿ ಭಾಗ್ಯ ಯೋಜನೆಯಿಂದ ಸಮಾಜದ ವ್ಯವಸ್ಥೆ ಏನಿದೆ ಅದರಲ್ಲಿ ಏನಾದರೂ ಬದಲಾವಣೆ ಕಂಡು ಬಂದಿದೆಯೇ ?

ಶ್ರೀ ಜಿ. ಬಸವಣ್ಣೆಪ್ಪ.—ನಾನು ಎಲ್ಲವನ್ನೂ ಹೇಳಿದ್ದೇನೆ. ಈ ಸಮಾಜ ಇರತಕ್ಕ ವ್ಯವಸ್ಥೆಯಲ್ಲಿ ಕೆಲವು ಸಂಪ್ರದಾಯಗಳು ಇವೆ. ಮದುವೆ ಮಾಡಬೇಕಾದರೆ ಇಷ್ಟು ಜನರಿಗೆ ಊಟ ಹಾಕಬೇಕು, ಇಷ್ಟು ಖರ್ಚಾಗುತ್ತದೆ ಜನರು ಆಸ್ತಿ ಪಾಸ್ತಿಗಳನ್ನು ಹಾಳು ಮಾಡಿಕೊಳ್ಳುತ್ತಿದ್ದರು ಈಗ ಖರ್ಚು ಇಲ್ಲದೆ ಮದುವೆ ಮಾಡತಕ್ಕಂಥದ್ದು ಸಾಮಾಜಿಕ ಪದ್ಧತಿ ಆಗಿದೆ.

ಶ್ರೀ ವೇದಾಂತ ಹೆಮ್ಮಿಗೆ.—ಅಧ್ಯಕ್ಷರೇ, ತಾಳಿ ಭಾಗ್ಯ ಯೋಜನೆಯಲ್ಲಿ ತಾಳಿ ಕಟ್ಟುವುದು ಜಾಸ್ತಿ ಆಗಿದೆಯೋ ಅಥವಾ ಕಡಿಮೆ ಆಗಿದೆಯೋ ?

ಶ್ರೀ ಜಿ. ಬಸವಣ್ಣೆಪ್ಪ.—ಈಗ ನಾವು ೮೭-೮೪ರಲ್ಲಿ we have provided a budget provision of Rs. 40 lakhs. ೧೯೮೫ರಿಂದ ಈ ಕಾರ್ಯಕ್ರಮ ರೂಪಿತವಾದದ್ದು. ಇದುವರೆಗೆ ೭೫ಳಳ ಫಲಾನುಭವಿಗಳಿಗೆ ತಾಳಿಯನ್ನು ಒದಗಿಸಿದ್ದೇವೆ. ಪ್ರಸಕ್ತ ವರ್ಷದಲ್ಲಿ ೪೦ ಲಕ್ಷ ರೂಪಾಯಿಯಲ್ಲಿ ೨೮ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. ಅಂದರೆ ಇದು ಕಡಿಮೆ ಆಗಿಲ್ಲವೆಂದು ಹೇಳುತ್ತೇನೆ.

ಶ್ರೀ ವೇದಾಂತ ಹೆಮ್ಮಿಗೆ.—ಸರ್ಕಾರ ತಾಳಿ ಕೊಡುತ್ತಿರುವುದರಿಂದ ವಿವಾಹ ವಿಚ್ಛೇದನೆ ಎಷ್ಟು ಆಗಿದೆ ? ಮಾನ್ಯ ಮಂತ್ರಿಗಳು ಬಜೆಟ್‌ನಲ್ಲಿ ೪೦ ಲಕ್ಷ ರೂಪಾಯಿಗಳ ಪೈಕಿ ೨೮ ಲಕ್ಷ ರೂಪಾಯಿಗಳು ಖರ್ಚು ಮಾಡಿದ್ದೇವೆಂದು ಹೇಳಿದ್ದಾರೆ. ಬಂಗಾರದ ಬೆಲೆ ಜಾಸ್ತಿ ಆಗಿರುವುದು ಮಂತ್ರಿಗಳ ಗಮನಕ್ಕೆ ಬಂದಿದೆಯೇ. ಬರೀ ಅವರು ಪರಿಶೀಲಿಸುವ ವಿಚಾರಿಸಂವ ಅಂದರೆ ಏನು ಅರ್ಥ? ಅದರೆ ನಿರ್ದಿಷ್ಟವಾಗಿ ತಾಳಿ ಕೊಡುತ್ತೇವೆ, ಬಂಗಾರದ ಬೆಲೆ ೫ ನೂರು ಆಗಲಿ, ೬ ನೂರು ಆಗಲಿ

ಅಥವಾ ೭ ನೂರು ಆಗಲಿ ಕೊಡುತ್ತೇವೆಂದು ನಿರ್ದಿಷ್ಟವಾಗಿ ಭರವಸೆ ಕೊಡಬೇಕು. ಈ ಕಾರ್ಯಕ್ರಮದ ಉದ್ದೇಶ ಮಂತ್ರಿಗಳಿಗೆ ಇದ್ದರೆ ಅಂದರೆ ಅವರುಗಳಿಗೆ ಲಗ್ನ ಮಾಡಬೇಕೆಂದು ಭಾವನೆ ಇದ್ದರೆ, ಆಸಕ್ತಿ ಇದ್ದರೆ ನಿರ್ದಿಷ್ಟವಾದ ಉತ್ತರವನ್ನು ಕೊಡಬೇಕೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

ಶ್ರೀ ಜಿ. ಬಸವಣ್ಣೆಪ್ಪ.—ಮಾನ್ಯ ವಿರೋಧ ಪಕ್ಷದ ಸದಸ್ಯರು ಹಾಗೂ ಆಡಳಿತ ಪಕ್ಷದ ಸದಸ್ಯರು ಎಲ್ಲರಿಗೂ ಸಹ ಈ ಯೋಜನೆ ಬಗ್ಗೆ ಕಳಕಳಿ ಇದೆ ಮತ್ತು ಅವರು ತಮ್ಮ ಮೆಚ್ಚುಗೆಯನ್ನು ವ್ಯಕ್ತ ಮಾಡಿದ್ದಾರೆ. ಇದರ ಬಗ್ಗೆ ಸರ್ಕಾರಕ್ಕೂ ಆಸಕ್ತಿಯಿದೆ. ಆದ್ದರಿಂದ ಸೂಕ್ತವಾದ ಕ್ರಮ ತೆಗೆದು ಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಬಾಬುರೆಡ್ಡಿ ವಿ. ತುಂಗಳ್.—ಈ ತಾಳಿ ಭಾಗ್ಯ ಯೋಜನೆ ಅಡಿಯಲ್ಲಿ ಮಾನ್ಯ ಮಂತ್ರಿಗಳು ಅಥವಾ ಶಾಸಕರು ಇದರ ಪ್ರಯೋಜನ ತೆಗೆದುಕೊಂಡಿದ್ದಾರೋ, ತಮ್ಮ ಮಕ್ಕಳ, ಜನರ ಸಲುವಾಗಿ ತೆಗೆದುಕೊಂಡಿದ್ದಾರೋ ? ಸಾಮಾನ್ಯ ಜನರಿಗೆ ಹಾಕಿಕೊಂಡು ಕಾರ್ಯಕ್ರಮದಲ್ಲಿ ದುರುಪಯೋಗ ಆಗಬಾರದು. ಮುಂದುವೆಗಳು ಪ್ರಮಾಣದಲ್ಲಿ ಈ ಯೋಜನೆಯಿಂದ ಹೆಚ್ಚು ಆಗಿದೆಯೇ ಎಂಬುದನ್ನು ಸಚಿವರು ತಿಳಿಸಬೇಕು.

ಶ್ರೀ ಜಿ. ಬಸವಣ್ಣೆಪ್ಪ.—೪೦ ಲಕ್ಷ ರೂಪಾಯಿಯಲ್ಲಿ ೨೮ ಲಕ್ಷ ರೂಪಾಯಿಗಳು ಖರ್ಚಾಗಿದೆ. ಮುಂದುವೆ ಪ್ರಮಾಣದಲ್ಲಿ ಹೆಚ್ಚು ಆಗಿದೆ, ಇದರಲ್ಲಿ ಶಾಸಕರೇ ಆಗಲೀ ಯಾರೇ ಆಗಲಿ ದುರುಪಯೋಗ ಮಾಡಿಕೊಂಡಿಲ್ಲ. ಅವರವರ ಕ್ಷೇತ್ರದಲ್ಲಿ ನಿಜವಾದ ಅರ್ಹ ಕುಟುಂಬಗಳು ಏನು ಇವೆ ಅವರನ್ನು ಗುರುತು ಹಚ್ಚಿ ಮುಂದೆ ಕರೆದುಕೊಂಡು ಬಂದು ಮುಂದುವೆ ಮಾಡಿಸುತ್ತಿದ್ದಾರೆ. ಮಂಗಳೂರಿನಲ್ಲಿ ನಮ್ಮ ಮಂತ್ರಿಗಳು ಇಂತಹ ಅರ್ಹ ಕುಟುಂಬಗಳನ್ನು ಗುರುತು ಹಚ್ಚಿ ತಾಳಿ ಭಾಗ್ಯ ಕಾರ್ಯಕ್ರಮ ಹೆಚ್ಚು ಮಾಡಿದ್ದಾರೆ.

ಶ್ರೀ ಪಿ. ಎಂ. ಉದಾಸಿ.—ತಾಳಿ ಭಾಗ್ಯ ಯೋಜನೆಯಲ್ಲಿ ೩೫೦ ರೂಪಾಯಿಗಳನ್ನು ಕೊಡ ಬೇಕೆಂದು ಯೋಜನೆ ಇದೆ. ಅದರಲ್ಲಿ ಬಟ್ಟೆಯೂ ಸೇರುತ್ತದೆ. ಬಂಗಾರವೂ ಸೇರುತ್ತದೆ ಬಟ್ಟೆ ಯನ್ನು ಕೊಡದ್ದಿದರೂ ಪರವಾಗಿಲ್ಲ. ತಾಳಿ ಬೆಲೆ ೫೦೦, ೬೦೦ ರೂಪಾಯಿ ಅಥವಾ ೭೦೦ ಆದರೂ ಬಂಗಾರದ ತಾಳಿಯನ್ನು ಕೊಡುವ ಬಗ್ಗೆ ತೀರ್ಮಾನ ಮಾಡುತ್ತಾರೆಯೇ ಎಂದು ಸಚಿವರು ತಿಳಿಸ ಬೇಕು.

ಶ್ರೀ ಜಿ. ಬಸವಣ್ಣೆಪ್ಪ.—ಮಾನ್ಯ ಸದಸ್ಯರ ಸಲಹೆ ಒಳ್ಳೆಯದು. ಅದನ್ನು ಪರಿಶೀಲಿಸುತ್ತೇನೆ.

ವಿದ್ಯಾರ್ಥಿ ನಿಲಯಗಳ ಮಂಜೂರಾತಿ

೩೭೫. ಶ್ರೀ ಆರ್. ವೆಂಕಟರಾವಂಯ್ಯ (ಮುಳಬಾಗಿಲು).—ಮಾನ್ಯ ಸಮಾಜ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

(ಅ) ರಾಜ್ಯದಲ್ಲಿ ಕಾಲೇಜು ಪ್ರೌಢ ಮತ್ತು ಮಾಧ್ಯಮಿಕ ಶಾಲೆಗಳ ಮಟ್ಟದಲ್ಲಿರುವ ಒಟ್ಟು ವಿದ್ಯಾರ್ಥಿನಿಲಯಗಳೆಷ್ಟು ?

(ಆ) ಆಶ್ರಮಶಾಲೆ ಮತ್ತು ವಸತಿಶಾಲೆಗಳೆಷ್ಟು ? ಹಾಗೂ ಒಟ್ಟು ವಿದ್ಯಾರ್ಥಿಗಳ ಸಂಖ್ಯೆ ಎಷ್ಟು ? ಅವುಗಳಲ್ಲಿ ಹರಿಜನ-ಗಿರಿಜನ ವಿದ್ಯಾರ್ಥಿನಿಲಯಗಳೆಷ್ಟು ? ಹಾಗೂ, ಇವುಗಳಲ್ಲಿರುವ ವಿದ್ಯಾರ್ಥಿ ವಿದ್ಯಾರ್ಥಿನೀಯರೆಷ್ಟು ? ಜಿಲ್ಲಾವಾರು ವಿವರ ನೀಡುವುದು.

(ಇ) ವಿದ್ಯಾರ್ಥಿನಿಲಯಗಳನ್ನು ಮಂಜೂರು ಮಾಡಲು ಸರ್ಕಾರವು ಅನುಸರಿಸುವ ನೀತಿ ಯೇನು ?

(ಈ) ಸರ್ಕಾರವು ಹೋಬಳಿ ಕೇಂದ್ರ ಹಾಗೂ ಪ್ರೌಢಶಾಲೆಗಳಿರುವ ಕಡೆ ವಿದ್ಯಾರ್ಥಿನಿಲಯ ಗಳನ್ನು ಸ್ಥಾಪಿಸಲು ಸೂಕ್ತ ಕ್ರಮ ಕೈಗೊಳ್ಳುವುದೇ ?

ಶ್ರೀ ಜಿ. ಬಸವಣ್ಣೆಪ್ಪ (ಸಮಾಜ ಕಲ್ಯಾಣ ಸಚಿವರು).—

(ಅ) ಸಮಾಜ ಕಲ್ಯಾಣ ಇಲಾಖೆ ... ೧೦೨೭
ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಇಲಾಖೆ ... ೯೪೬